# ಚಾರ್‌ಧಾಮ್ ಯಾತ್ರೆಯ ದಿವ್ಯ ಅನುಭವ

ವೈಷ್ಣವಿ ಪಿ.

ನಾಲ್ಕು ಧಾಮಗಳ ಯಾತ್ರೆ ಒಬ್ಬೊಬ್ಬರಿಗೂ ಒಂದೊಂದು ಬಗೆಯ ಅನುಭವವನ್ನು ತಂದುಕೊಡುತ್ತದೆ. ಅಲ್ಲಿನ ಭೌಗೋಳಿಕ ವಿಭಿನ್ನತೆ, ಹಿಮಾಲಯದ ದಿವ್ಯ ಪರಿಸರ, ಆಧ್ಯಾತ್ಮಿಕ ಸ್ಪಂದನ ಇವು ಯಾತ್ರಿಕರನ್ನು ರೋಮಾಂಚನಗೊಳಿಸುತ್ತವೆ. ಈ ಕುರಿತು ತಮ್ಮ ಅನುಭವಗಳನ್ನು ಇಲ್ಲಿ ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿದ್ದು, ವೃತ್ತಿಯಲ್ಲಿ ಕಂಪ್ಯೂಟರ್ ಇಂಜಿನಿಯರ್ ಆಗಿದ್ದಾರೆ.

## ತಯಾರಿ

ನನಗೆ ಚಾರ್‌ಧಾಮ್ ಯಾತ್ರೆಯನ್ನು ಮಾಡಬೇಕು ಎಂಬ ಆಸೆ ಬಹಳ ದಿನಗಳಿಂದ ಇತ್ತು. ಒಂದು ದಿನ ಯೋಚಿಸಿದೆ, ಈ ಬಾರಿ ಚಾರ್ ಧಾಮ್ ಯಾತ್ರೆಯನ್ನು ಮಾಡೇಬಿಡೋಣ ಎಂದು. ಅದಕ್ಕೆ ಮೊದಲು ಪ್ಯಾಕೇಜ್ ಟೂರ್‌ನಲ್ಲಿ ಬುಕ್ ಮಾಡಿದೆ. ನಂತರ ಹಲವು ಅಡ್ಡಿಗಳು ಒದಗಿ ಬಂದರೂ, ತಯಾರಿ ಎಲ್ಲವೂ ಚೆನ್ನಾಗಿಯೇ ನಡೆಯಿತು. ಅಂತು ಚಾರ್‌ಧಾಮ್‌ಗೆ ಹೋಗುವ ದಿನ ಬಂದೇ ಬಿಟ್ಟಿತು. ೨೦೨೨ರ ಮೇ ೨೦ ರಂದು ನಾವು ಮೈಸೂರಿನಿಂದ ದೆಹಲಿಗೆ ವಿಮಾನದಲ್ಲಿ ಹೋದೆವು. ಮೇ ೨೧ ಬೆಳಿಗ್ಗೆ ಸುಮಾರು ಆರು ಗಂಟೆಗೆ ನಾವು ದೆಹಲಿಯ ಕರೋಲ್‌ಬಾಗ್‌ನಿಂದ ಹರಿದ್ವಾರಕ್ಕೆ ಹೊರಟೆವು. ಸುಮಾರು ಹನ್ನೊಂದೂವರೆ ಹೊತ್ತಿಗೆ ಕಂಖಲ್‌ಗೆ ಬಂದೆವು. ಅಲ್ಲಿ ನಾವು ಸತಿ ಹುಟ್ಟಿದ ಜಾಗ, ಲಕ್ಷ್ಮೀನಾರಾಯಣ ಮಂದಿರ, ಶಿವಮಂದಿರ ಹಾಗೂ ಪಕ್ಕದಲ್ಲಿ ರಭಸದಲ್ಲಿ ಹರಿಯುತ್ತಿದ್ದ ಗಂಗೆಯನ್ನು ನೋಡಿದೆವು. ಹರಿದ್ವಾರದಲ್ಲಿ ವಿಪರೀತವಾದ ಸೆಖೆ. ಆ ಸೆಖೆಯಲ್ಲೂ ಗಂಗೆ ಎಷ್ಟು ತಂಪಾಗಿದ್ದಳು, ಏನಾಶ್ಚರ್ಯ! ಮಂದಿರದ ದರ್ಶನದ ನಂತರ ನಾವು ಹೋಟೆಲ್‌ಗೆ ಹೋಗಿ ಸ್ವಲ್ಪ ಹೊತ್ತು ವಿಶ್ರಮಿಸಿ, ಹರಿ ಕೀ ಪೌಡಿಗೆ ಹೋದೆವು. ಅಲ್ಲಿ ನಾವು ಗಂಗಾರತಿಯನ್ನು ನೋಡಿದೆವು. ಹಾಗೆ ಗಂಗಾಪೂಜೆಯನ್ನು ಸಹ ಮಾಡಿದೆವು.

## ಯಮುನೋತ್ರಿಗೆ

ಮೇ ೨೨ರಂದು ಬೆಳಿಗ್ಗೆ ೫ ಗಂಟೆಗೆ ಯಮುನೋತ್ರಿಯ ಕಡೆಗೆ ಹೊರಟೆವು. ಒಂದು ಕಡೆ ಮಧ್ಯಾಹ್ನ ಊಟಕ್ಕಾಗಿ ನಿಲ್ಲಿಸಿದರು. ನಾವು ಅಲ್ಲಿ ಊಟ ಮಾಡಿದ ನಂತರ ಪ್ರಕೃತಿಯ ಸೌಂದರ್ಯವನ್ನು ನೋಡುತ್ತ ಚಿತ್ರಗಳನ್ನು ತೆಗೆಯುತ್ತಿದ್ದೆವು. ಆ ಸಮಯದಲ್ಲಿ ಬಿಸಿಲಿನಿಂದ ನಮ್ಮ ಎದುರು ಇದ್ದ ಒಂದು ಬೆಟ್ಟದಲ್ಲಿ ಮರಗಳಿಗೆಲ್ಲ ಬೆಂಕಿ ಹತ್ತಿ ಉರಿಯುತ್ತಿದ್ದವು! ಮತ್ತೊಂದು ಕ್ಷಣದಲ್ಲಿಯೇ ಎಂಥ ರಭಸದ ಗಾಳಿ ಬಂದಿತ್ತೆಂದರೆ ಭೂಮಿಯಲ್ಲಿ ಇದ್ದ ಮಣ್ಣೆಲ್ಲ ನಮ್ಮ ಕಿವಿ, ಕಣ್ಣಿನ ಒಳಗೆಲ್ಲ ಹೋಯಿತು. ನಾವು ತೂರಾಡಿದೆವು. ನಾನು ಎಂದೂ ಅಂಥಹ ಗಾಳಿಯನ್ನು ನೋಡೇ ಇರಲಿಲ್ಲ. ಇನ್ನೊಂದು ಕ್ಷಣದಲ್ಲಿ ಗಾಳಿ, ಮಳೆಹನಿ ಶುರುವಾಗಿ, ಬಳಿಕ ನಿಂತುಹೋಯಿತು. ಕ್ಷಣಮಾತ್ರದಲ್ಲಿಯೇ ಪ್ರಕೃತಿಯು ಎಲ್ಲವನ್ನೂ ಬದಲಾಯಿಸಿಬಿಟ್ಟಳು. ಯಾವಾಗ ಏನಾಗುತ್ತದೆ ಎಂಬುದನ್ನು ಯಾರು ಅರಿಯ ಬಲ್ಲರು? ಎಲ್ಲವೂ ಪ್ರಕೃತಿಯ ಮಾಯೆ! ಅಂತೂ ಅಲ್ಲಿಂದ ಮುಂದಕ್ಕೆ ಸಾಗಿದೆವು. ಭರಕೋಟ್‌ಗೆ ತಲುಪಿದ ನಂತರ ಅಲ್ಲಿಂದ ಮುಂದಕ್ಕೆ ಹೋಗಲು ಪೋಲಿಸರು ಬಿಡಲಿಲ್ಲ. ಯಾಕೆ ಅಂದರೆ ರಾಣಾಚಟ್ಟಿಯ ಹತ್ತಿರ ಭೂಕುಸಿತವಾಗಿತ್ತು. ಹಾಗಾಗಿ ಯಾರನ್ನೂ ಬಿಡುತ್ತಿರಲಿಲ್ಲ. ನಾವು ಆ ದಿನ ತಂಗುವ ಜಾಗ ರಾಣಾಚಟ್ಟಿಯೇ ಆಗಿತ್ತು. ಮುಂದೆ ಹೋಗಲು ಅವಕಾಶವಿಲ್ಲದಿದ್ದ ಕಾರಣ ನಮ್ಮ ಮ್ಯಾನೇಜರ್ ಚಾತುರ್ಯದಿಂದ ತಕ್ಷಣ ಖರಾಡಿ ಎಂಬ ಸ್ಥಳದಲ್ಲಿ ಕೆಲವು ರೂಂಗಳನ್ನು ಖರೀದಿಸಿ, ಅಂದು ರಾತ್ರಿ ಅಲ್ಲಿ ತಂಗಲು ವ್ಯವಸ್ಥೆಯಾಯಿತು. ಮೇ ೨೩ಕ್ಕೆ ನಾವು ಖರಾಡಿಯಿಂದ ಜಾನಕೀಚಟ್ಟಿಗೆ ಹೋದೆವು. ಅಲ್ಲಿಂದ ಯಮುನೋತ್ರಿ ದೇವಸ್ಥಾನಕ್ಕೆ ಹೋಗಲು ನಾವು ಕೆಲವರು ಕುದುರೆ, ಡೋಲಿ, ನಡಿಗೆಯಲ್ಲಿ ಹೊರಟೆವು. ನಾನು, ನನ್ನ ತಾಯಿ ಇಬ್ಬರೂ ಕಾಲುನಡಿಗೆಯಲ್ಲೆ ಹೊರಟೆವು. ಅಂದು ಬೆಳಿಗ್ಗೆ ಮಳೆ ಬರುತ್ತಿದ್ದ ಕಾರಣ ತುಂಬ ಕೊಚ್ಚೆ ; ನಡೆಯಲು ಕಷ್ಟವಾಗುತ್ತಿತ್ತು. ನೆಲ ತುಂಬ ಜಾರುತ್ತಿದ್ದರಿಂದ ನಿಧಾನವಾಗಿ ನಡೆಯಬೇಕಾಯಿತು. ಅಂತೂ ಭೂಕುಸಿತ, ಮಳೆ ಇದರೆಲ್ಲದರ ಮಧ್ಯೆ ನಮ್ಮ ಯಮುನಾಮಾತೆಯ ದರ್ಶನ ತುಂಬಾ ಚೆನ್ನಾಗಿ ಆಯಿತು. ದರ್ಶನವಾದ ನಂತರ ನಾನು, ನನ್ನ ತಾಯಿ ಸುಮಾರು ಸಾಯಂಕಾಲ ೫ ಗಂಟೆಗೆ ಜಾನಕೀಚಟ್ಟಿಗೆ ಇಳಿದು ಬಂದೆವು. ನಮ್ಮ ಜೊತೆ ಬಂದವರು ಕೆಲವರು ನಮಗಿಂತ ಬೇಗ ಬಂದಿದ್ದರು, ಇನ್ನೂ ಕೆಲವರು ಬರುವವರಿದ್ದರು. ಎಲ್ಲರೂ ಮರಳಿದ ಮೇಲೆ ನಾವು ರಾಣಾಚಟ್ಟಿಗೆ ಮರಳಿ, ಅಂದಿನ ರಾತ್ರಿ ಅಲ್ಲಿ ಕಳೆದೆವು. ಯಮುನೋತ್ರಿ ಬೆಟ್ಟವನ್ನು ಹತ್ತಿ ದಣಿದಿದ್ದರೂ ಆ ಸುಂದರ ಪ್ರಕೃತಿಯನ್ನು ನೋಡಿದರೆ ಎಲ್ಲವೂ ಮರೆತು ಹೋಗುತ್ತದೆ.

## ಉತ್ತರಕಾಶಿಯತ್ತ

ಮೇ ೨೪, ನಾವು ಯಮುನೋತ್ರಿಯಿಂದ ಉತ್ತರ ಕಾಶಿಗೆ ಹೊರಟೆವು. ಬೆಳಿಗ್ಗೆ ಸುಮಾರು ೮ ಗಂಟೆಗೆ ಹೊರಟೆವು. ಆದರೆ ಮತ್ತೊಂದು ಭೂಕುಸಿತ, ಮಳೆ ಇವುಗಳ ಕಾರಣದಿಂದ ಯಾವ ವಾಹನವನ್ನೂ ಬಿಡುತ್ತಿರಲಿಲ್ಲ. ಸುಮಾರು ೧:೨೦ಕ್ಕೆ ನಾವು ರಾಣಾಚಟ್ಟಿಯಿಂದ ಹೊರಟೆವು. ಉತ್ತರಕಾಶಿಗೆ ಹೋಗುವಾಗ ಅದ್ಭುತವಾದ ದೃಶ್ಯಗಳನ್ನು ನಾನು ಕಂಡೆ. ಭರ್‌ಕೋಟ್ ನಂತರ ಉತ್ತರ

ಕಾಶಿಗೆ ಹೋಗುವ ಸಿಗುವ ಬೆಟ್ಟಗಳು ತುಂಬ ಎತ್ತರವಾದದ್ದು. ಮೇಲೆ ಮೇಲೆ ಹೋದಷ್ಟು ಕೆಳಗಿನ ದೃಶ್ಯವು ಅದ್ಭುತ. ಅದನ್ನು ನೋಡುತ್ತ ಆನಂದದಿಂದ ಮುಂದೆ ಸಾಗುತ್ತಿದ್ದೆ. ಭರ್‌ಕೋಟ್ ಪ್ರದೇಶವನ್ನು ನಾವು ಉತ್ತರಕಾಶಿಗೆ ಹೋಗುವ ಪರ್ವತದಿಂದ ನೋಡಿದಾಗ ನಾವು ಮೋಡದ ಮೇಲೆ ಬಂದೆವು ಅನ್ನಿಸುತ್ತಿತ್ತು.

ನಾವು ರಾಣಾ ಚಟ್ಟಿಯಲ್ಲಿ ಇದ್ದಾಗ ಮಂಜು ಅಥವಾ ಮೋಡ ನಮ್ಮ ಹತ್ತಿರವಿತ್ತು, ಅದೇ ಆಕಾಶವೆಂದುಕೊಂಡಿದ್ದೆವು. ಆದರೆ ಪರ್ವತವನ್ನು ಏರುತ್ತಾ ಹೋದಂತೆ, ಅದಕ್ಕಿಂತಲೂ ಮೇಲೆ ಮೋಡವಿರುವುದನ್ನು ನೋಡಿದೆ. ಆ ಸಮಯದಲ್ಲಿ ನನ್ನ ಮನಸ್ಸಿಗೆ ಹೀಗೆ ಅನ್ನಿಸಿತು: ನಾವು ನಮ್ಮ ಒಂದು ತಿಳಿವಳಿಕೆಯಲ್ಲೇ ಸೀಮಿತ ವಾಗಿದ್ದು, ಅದರಿಂದ ಹೊರಗೂ ಇನ್ನೇನೋ ಇದೆ ಎಂದರಿಯದೆ ಇದ್ದುಬಿಟ್ಟಿದ್ದೇವೆ. ಆದರೆ ನಾವು ಈಗ ಇರುವಿಕೆಯ ಮಿತಿಯನ್ನು ಮೀರಿ ಆಲೋಚಿಸಿ ಮುನ್ನಡೆದರೆ ಇನ್ನೂ ಅದ್ಭುತವಾದ ವಿಷಯ ಗಳು ನಮಗೆ ಗೋಚರವಾಗುತ್ತದೆ. ಇಲ್ಲಿ ನನಗೆ ಬಹಳಷ್ಟು ಆಧ್ಯಾ ತ್ಮಿಕ ಸಂಗತಿಗಳು ನೆನಪಿಗೆ ಬಂದುವು. ಮೊದಲಿಗೆ, ಮಾಯೆಯ ಆಟದಲ್ಲಿ ನಮ್ಮನ್ನು ನಾವು ಬಂಧಿಸಿಕೊಂಡು, ಅದಕ್ಕಿಂತಲೂ ಮೀರಿ ಹೋಗಬಹುದು ಎಂಬುದನ್ನು ಮರೆತು ಬಂಧನದಲ್ಲಿರುತ್ತೇವೆ. ಎರಡನೆಯದು ಸ್ವಾಮೀಜಿಯವರು ಹೇಳಿದ ಬಾವಿಯೊಳಗಿನ ಕಪ್ಪೆಯ ಕಥೆಯಂತೆ. ಭರ್‌ಕೋಟ್‌ನಲ್ಲಿ ಇದ್ದಾಗ ಇದೇ ಆಕಾಶ ಎಂದು ಭಾವಿಸಿ, ಮುಂದುಮುಂದಕ್ಕೆ ಹೋದಂತೆ ಮತ್ತೊಂದು ವಿಶಾಲವಾದ ಆಕಾಶ. ಅಂದರೆ ಬಂಧನದಿಂದ ಪಾರಾದರೆ ವಿಶಾಲ ವಾದ ಭಗವಂತನನ್ನು ಸೇರಬಹುದು. ಪ್ರಕೃತಿಯೇ ಎಷ್ಟೋ ವಿಷಯವನ್ನು ತೋರಿಸುತ್ತಿದ್ದಾಳೆ. ಆದರೆ ನಾವು ಯಾವುದಕ್ಕೂ ಗಮನ ಕೊಡದೆ ಬಂಧನದಲ್ಲಿ ಮುಳುಗಿದ್ದೇವೆ. ಅಂತೂ ಪ್ರಕೃ ತಿಯ ವೈಭವವನ್ನು ನೋಡುತ್ತಾ, ಆನಂದಿಸುತ್ತಾ ಸುಮಾರು ರಾತ್ರಿ ೧೦:೩೦ಕ್ಕೆ ನಾವು ಉತ್ತರಕಾಶಿಯನ್ನು ತಲುಪಿದೆವು.

## ಗಂಗೋತ್ರಿಧಾಮ

ಮೇ ೨೫, ಬೆಳಿಗ್ಗೆ ೫ ಗಂಟೆಗೆ ಗಂಗೋತ್ರಿಗೆ ಹೊರಟೆವು. ಪ್ರಕೃತಿಯನ್ನು ಆನಂದಿಸುತ್ತಾ, ಪಕ್ಕದಲ್ಲಿ ಹರಿಯುತ್ತಿದ್ದ ಗಂಗೆ



ಯನ್ನು ನೋಡುತ್ತಾ ಗಂಗೋತ್ರಿಯನ್ನು ತಲುಪಿ ದೆವು. ಅಂದು ಬಹಳ ಬಿಸಿಲಿತ್ತು. ಆದ ಕಾರಣ ನನಗೆ ಗಂಗಾನದಿಯಲ್ಲಿ ಸ್ನಾನ ಮಾಡಲು ಸುಲಭ ವಾಯಿತು. ಗಂಗಾನದಿ ಯಲ್ಲಿ ಹರಿ, ಶಿವ, ಬ್ರಹ್ಮ ನಿಗೆ ನಮಸ್ಕರಿಸಿ ಮೂರು ಬಾರಿ ಮುಳುಗಿದೆ. ಗಂಗಾನದಿಯು ತುಂಬ ತಣ್ಣಗಿತ್ತು, ಐಸ್‌ನಂತಹ ನೀರು. ಗಂಗಾನದಿಯಲ್ಲಿ ಮುಳುಗಿದ ಮೇಲೆ ದೇವಸ್ಥಾನಕ್ಕೆ ಹೋಗಿ ಗಂಗಾಮಾತೆಯ ದರ್ಶನವನ್ನು ಮಾಡಿದೆವು. ಅಲ್ಲಿಯ ಪರ್ವತದ ಸೌಂದರ್ಯವನ್ನು ಆನಂದಿಸಿ, ಬಸ್ ನಿಂತಿದ್ದ ಜಾಗಕ್ಕೆ ಮರಳಿದೆವು. ಅಲ್ಲೇ ಮಧ್ಯಾಹ್ನದ ಊಟವನ್ನು ಮುಗಿಸಿ ಉತ್ತರ ಕಾಶಿಗೆ ತೆರಳಿದೆವು. ಅಂದೇ ಉತ್ತರಕಾಶಿಯಲ್ಲಿ ಇರುವ ವಿಶ್ವನಾಥ ಮಂದಿರಕ್ಕೆ ಹೋದೆವು. ಅಲ್ಲಿ ಶಿವನ ದೊಡ್ಡ ತ್ರಿಶೂಲವಿದೆ. ಒಂದು ಶಿವಮಂದಿರ ಹಾಗೂ ಒಂದು ಹನುಮಂತನ ದೇವಸ್ಥಾನವಿದೆ. ಇದನ್ನೆಲ್ಲ ದರ್ಶನಮಾಡಿ ಉತ್ತರಕಾಶಿಯಲ್ಲಿ ಬುಕ್ ಮಾಡಿದ್ದ ಹೋಟೆಲ್‌ಗೆ ಮರಳಿದೆವು.

## ಕೇದಾರನಾಥದ ಕಡೆಗೆ

ಮೇ ೨೬ಕ್ಕೆ ಉತ್ತರಕಾಶಿಯಿಂದ ನಾವು ಸೀತಾಪುರಕ್ಕೆ ಹೊರ ಟೆವು. ಅಂದು ಇಡೀದಿನ ಪ್ರಯಾಣವೇ ಆಯಿತು. ದಾರಿಯಲ್ಲಿ ಬರುವಾಗ ತೆಹರಿಯ ಡ್ಯಾಮ್ ನೋಡಿದೆವು. ರಾತ್ರಿ ನಾವು ಸೀತಾ ಪುರಕ್ಕೆ ಬಂದೆವು. ಅಂತು ಹಲವು ದಿನಗಳಿಂದ ಕಾಯುತ್ತಿದ್ದ ಕ್ಷಣ ಬಂದಿದೆ. ಮರುದಿನ ಬೆಳಗಾದರೆ ಕೇದಾರನ ದರ್ಶನ. ಆನಂದ ದಿಂದ ನಾಳೆಗಾಗಿ ಕಾಯುತ್ತಿದ್ದೆ. ರಾತ್ರಿ ಹೊತ್ತು ನನಗೆ ಒಂದು ಫೋನ್ ಬಂದಿತು. ಅದು ನಾನು ಬುಕ್ ಮಾಡಿದ್ದ ಹೆಲಿಕಾಪ್ಟರ್ ನವರದಾಗಿತ್ತು. (ನಾವು ಕೇದಾರಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗಲು ಮುಂಚೆಯೇ ಬುಕ್ ಮಾಡಿದ್ದೆ.) ನಾನು ಬುಕ್ ಮಾಡಿದ್ದು ಸೆರಸಿಯಿಂದ, ಆದರೆ ಅವರು ನನಗೆ ಸೋನ್‌ಪ್ರಯಾಗ ತ್ರಿಜುಗಿ ನಾರಾಯಣ ರಸ್ತೆಯಲ್ಲಿರುವ ಹೆಲಿಪ್ಯಾಡ್‌ಗೆ ಬರಲು ಹೇಳಿದರು. ನಾನು ಆಗ ಅಷ್ಟು ಯೋಚಿಸಲಿಲ್ಲ. ಆದರೆ ಫೋನ್ ಇಟ್ಟ ನಂತರ ಅನ್ನಿಸಿತು, ಇದು ಮೋಸ ಮಾಡಲು ಇರಬಹುದೇ, ಹೆಲಿಕಾಪ್ಟರ್ ನವರು ಫೋನ್ ಮಾಡುವರೇ, ಎಂದು ಸಂಶಯ ಮೂಡಿತು. ನಾನು ಹೋಗಿ ನಮ್ಮ ಟೂರ್ ಮ್ಯಾನೇಜರ್‌ಗೆ ಹೇಳಿದೆ. ಅವರು ಸೋನ್‌ಪ್ರಯಾಗದ ಹೆಲಿಪ್ಯಾಡ್ ಸರಿ ಇಲ್ಲ, ಎಷ್ಟು ಹೊತ್ತಾದರೂ ಕರೆಯುವುದಿಲ್ಲ ಎಂದು ಹೇಳಿದರು. ಈ ಗೊಂದಲದಿಂದ ಶಿವ ನನ್ನು ಪ್ರಾರ್ಥಿಸಿದೆ. ಮತ್ತೆ ಹೆಲಿಕಾಪ್ಟರ್‌ನವರಿಗೆ ಫೋನ್ ಮಾಡಿ ದರೆ ಫೋನ್ ಸಂಪರ್ಕ ಆಗುತ್ತಿರಲಿಲ್ಲ. ಗೂಗಲ್ ಮಾಡಿದರೂ ಏನೂ ವಿಷಯ ತಿಳಿದು ಬರಲಿಲ್ಲ. ಸರಿ ಇನ್ನೇನು ಮಾಡೋಣ, ಆಗಿದ್ದು ಆಗಲಿ ಶಿವನಿಗೆ ಬಿಟ್ಟಿದ್ದು ಅಂದುಕೊಂಡು ಮಲಗಿದೆ.

ಮೇ೨೭ ಬೆಳಿಗ್ಗೆ ೩:೩೦ ಕ್ಕೆ ಎದ್ದು ತಯಾರಾದೆವು. ನಮ್ಮ ಜೊತೆ ಬಂದವರು ೨:೩೦ಕ್ಕೆ ತಯಾರಾಗಿ ಡೋಲಿ, ಬೇರೆ ಹೆಲಿಕಾಪ್ಟರ್, ಕುದುರೆ ಮೂಲಕ ಹೊರಟರು. ನಮಗೆ ಕೊಟ್ಟ ಸಮಯ ಬೆಳಿಗ್ಗೆ ೬ ಗಂಟೆಗೆ. ೪:೩೦ಕ್ಕೆ ಟ್ಯಾಕ್ಸಿಗೆ ಹೇಳಿದ್ದೆ; ಹೆಲಿಪ್ಯಾಡ್‌ಗೆ ನಾನು ಮತ್ತು ನನ್ನ ತಾಯಿಯನ್ನು ಕರೆದುಕೊಂಡು ಹೋಗಲು. ಆದರೆ ಟ್ಯಾಕ್ಸಿ ೪:೩೦ ಆದರೂ ಬರಲಿಲ್ಲ, ಅವರು ಬೇರೆ ಜಾಗದಿಂದ ಬರಬೇಕಾ ಗಿತ್ತು. ಬರುವಾಗ ಅವರು ಟ್ರ್ಯಾಫಿಕ್‌ನಲ್ಲಿ ಸಿಲುಕಿ ತಡವಾಗಿ ಬಂದರು. ನನಗೆ ಭಯವಾಗಲು ಶುರುವಾಯಿತು. ಆ ದಿನ ದರ್ಶನ ವಾಗದಿದ್ದರೆ, ಮತ್ತೊಂದು ದಿನ ಬಿಡುವಿರಲಿಲ್ಲ – ಡೋಲಿ ಕುದುರೆ ಯಲ್ಲಿ ಹೋಗಲು. ಆ ದಿನವೇ ಡೋಲಿ ಕುದುರೆಯಲ್ಲಿ ಹೋಗಿ



ಬರುವಷ್ಟು ಸಮಯ ವಿರಲಿಲ್ಲ. ಸುಮಾರು ೫ ಗಂಟೆಗೆ ಟ್ಯಾಕ್ಸಿಯವನು ಬಂದ. ನಾವು ಹೊರಟೆವು. ಸ್ವಲ್ಪ ದೂರ ಹೋಗುವಷ್ಟರಲ್ಲಿ ರಸ್ತೆ ಜಾಮ್ ಆಗಿತ್ತು. ಆಗಲೆ ೫ ಗಂಟೆ ಆಗಿಬಿಟ್ಟಿದೆ. ೬:೦೦ -೯:೦೦ರ ಅವಧಿಯ ಸ್ಲಾಟ್‌ಗೆ ಬುಕ್ ಮಾಡಿದ್ದೆ. ಅದಕ್ಕೆ ೫ ಗಂಟೆಗೆ ರಿಪೋರ್ಟ್ ಮಾಡಿಕೊಳ್ಳಬೇಕಾಗಿತ್ತು. ೫:೪೫ ಕ್ಕೆ ಸೋನ್ ಪ್ರಯಾಗ್ ಹೆಲಿಪ್ಯಾಡ್ ತಲುಪಿದೆವು. ಬಹಳಷ್ಟು ಜನರಿದ್ದರು. ನಾನು ಹೋಗಿ ನೋಂದಾಯಿಸಿದೆ. ತುಂಬ ಜನರು ನಮಗಿಂತ ಮೊದಲೇ ಬಂದವರು ಕಾಯುತ್ತ ಕುಳಿತಿದ್ದರು, ಬೋರ್ಡಿಂಗ್ ಪಾಸ್‌ಗಾಗಿ. ಆದರೆ ಆಶ್ಚರ್ಯವೇನೆಂದರೆ, ನನ್ನನ್ನು ಮತ್ತು ನನ್ನ ತಾಯಿಯನ್ನು ಅವರಿಗಿಂತ ಮೊದಲೇ ಕರೆದು, ತೂಕವನ್ನೆಲ್ಲ ನೋಡಿ ಬೋರ್ಡಿಂಗ್ ಪಾಸ್ ಕೊಟ್ಟರು. ಇದೆಲ್ಲ ಆಗುವಷ್ಟರಲ್ಲಿ ಆರೂಮುಕ್ಕಾಲಾಗಿರಬಹುದು. ನಾವು ಹೆಲಿಕಾಪ್ಟರ್‌ನಲ್ಲಿ ಹೋಗುವ ಸರದಿಗಾಗಿ ಕಾಯುತ್ತಿದ್ದೆವು. ಅಂತು ಕೇದಾರನಾಥನ ಕೃಪೆಯಿಂದ ನಾವು ಹೆಲಿಕಾಪ್ಟರ್‌ಯಿಂದ ಕೇದಾರಕ್ಕೆ ಸುಮಾರು ಏಳೂಕಾಲಿಗೆ ತಲುಪಿದೆವು. ಸೋನ್‌ಪ್ರಯಾಗದಿಂದ ಕೇದಾರಿಗೆ ೭ ನಿಮಿಷ. ಹೆಲಿಕಾಪ್ಟರ್‌ನಲ್ಲಿ ಹೋಗುವಾಗ ಆ ಪರ್ವತಗಳನ್ನು ನೋಡುತ್ತಿದ್ದಂತೆ ಕೇದಾರ ಮಂದಿರದ ಹತ್ತಿರ ಇರುವ ಪರ್ವತಗಳು ಕಣ್ಣಿಗೆ ಬೀಳುತ್ತಿದಂತೆ ನನ್ನ ಆನಂದಕ್ಕೆ ಪಾರವೇ ಇಲ್ಲ! ಆಹ! ಎಂತಹ ದೃಶ್ಯ! ಸುಮಾರು ೮ ಗಂಟೆಗೆ ನಮಗೆ ಯಾವ ತೊಂದರೆಯೂ ಇಲ್ಲದೆ ಕೇದಾರನ ದರ್ಶನ ವಾಯಿತು. ಈಚೆಗೆ ನಿರ್ಮಿಸಿರುವ ಶಂಕರಾಚಾರ್ಯರ ಮೂರ್ತಿಯನ್ನು ನೋಡಿದೆವು. ಹಾಗೆ ಕೇದಾರ ಮಂದಿರದ ಮುಂದೆ ಕುಳಿತು ಸ್ವಲ್ಪ ಹೊತ್ತು ಅವನ ಧ್ಯಾನವನ್ನು ಮಾಡಿ ಹಿಂದಿರುಗಿ ಹೆಲಿಪ್ಯಾಡ್‌ಗೆ ಬಂದೆವು. ಅಲ್ಲಿಂದ ಸೋನ್ ಪ್ರಯಾಗ್‌ಗೆ ೧೦:೩೦ಕ್ಕೆ ಬಂದೆವು. ಅಲ್ಲಿಂದ ಸೀತಾಪುರಕ್ಕೆ ೧೧ ಗಂಟೆಗೆ ಬಂದು ತಲುಪಿದೆವು.

## ಬದರೀನಾಥ

ಮೇ ೨೮ ರಂದು ಸೀತಾಪುರದಿಂದ ಮತ್ತೊಂದು ಅದ್ಭುತವಾದ ಸ್ಥಳ ಬದರೀ ವಿಶಾಲನ ದರ್ಶನಕ್ಕೆ ನಮ್ಮ ಪಯಣ ಶುರುವಾಯಿತು. ಕೇದಾರ್‌ನಿಂದ ಬದರೀನಾಥಕ್ಕೆ ಹೋಗುವ ಮಾರ್ಗ ಬಹಳ ದೀರ್ಘವಾದ ಕಾರಣ, ನಾವು ಮಧ್ಯದಲ್ಲಿ ಪೀಪಲ್ ಕೋಟ್ ಎಂಬ ಊರಿನಲ್ಲಿ ಉಳಿದುಕೊಂಡೆವು.

ಮೇ ೨೯, ಪೀಪಲ್‌ಕೋಟ್‌ನಿಂದ ನಾವು ಬದರಿಗೆ ಹೊರಟೆವು. ಹೋಗುವಾಗ ನಾವು ಜೋಷೀಮಠಕ್ಕೆ ಹೋಗಿ ಶಂಕರಾಚಾರ್ಯರು ಇದ್ದ ಜಾಗ, ನೃಸಿಂಹ ಮಂದಿರ, ವಿಷ್ಣು ಮಂದಿರ ಎಲ್ಲವನ್ನೂ ದರ್ಶನ ಮಾಡಿದೆವು. ಬದರಿಗೆ ಹೋಗುವ ಮಾರ್ಗದಲ್ಲಿ ಪ್ರಕೃತಿಯ ಸೌಂದರ್ಯ ಅತ್ಯದ್ಭುತ! ಜೋಷೀಮಠ ನೋಡಿದ ಮೇಲೆ ವಿಷ್ಣುಪ್ರಯಾಗಕ್ಕೆ ಬಂದೆವು. ಅಲ್ಲಿ ತಿಂಡಿ ತಿಂದು, ಪ್ರಯಾಗ ನೀರನ್ನು ಸ್ವಲ್ಪ ತೆಗೆದುಕೊಂಡು ಬದರಿಯ ಕಡೆ ಹೊರಟೆವು. ಸುಮಾರು ೧೧ಕ್ಕೆ ನಾವು ಬದರಿ ತಲುಪಿದೆವು. ಬಹಳ ಜನರು ಇದ್ದ ಕಾರಣ, ನಾವು ಸಾಯಂಕಾಲ ದರ್ಶನಕ್ಕೆ ವಿಶೇಷ ದರ್ಶನಕ್ಕೆ ಟಿಕೆಟನ್ನು ತೆಗೆದುಕೊಂಡಿದ್ದವು. ಹಾಗಾಗಿ ನಾವು ಮೊದಲು ಭಾರತದ ಕೊನೆಯ ಹಳ್ಳಿ ಮಾನಾಗೆ ಹೋದೆವು. ಅಲ್ಲಿ ಗಣೇಶ ಗುಫ, ವ್ಯಾಸ ಗುಫ, ಭೀಮ್‌ಪುಲ್ ಹಾಗೂ ಸರಸ್ವತಿ ನದಿಯ ಉಗಮ ಸ್ಥಾನವನ್ನು ನೋಡಿದೆವು. ಅಲ್ಲಿಂದ ಮತ್ತೆ ಬದರಿಗೆ ಹಿಂದಿರುಗಿದೆವು. ಸಾಯಂಕಾಲ ಬದರಿ ವಿಶಾಲನ ದರ್ಶನಕ್ಕೆ ಹೋದೆವು. ಸುಮಾರು ೭:೩೦ಕ್ಕೆ ನಮ್ಮನ್ನು ಮಂದಿರದ ಒಳಗೆ ಬಿಟ್ಟರು. ವಿಷ್ಣು ಸಹಸ್ರನಾಮವಳಿಗೆ ಟಿಕೆಟ್ ತೆಗೆದುಕೊಂಡ ಕಾರಣ ನಮಗೆ ದೇವರ ಮುಂದೆ ೨೦ ನಿಮಿಷ ಕುಳಿತುಕೊಳ್ಳಲು ಬಿಟ್ಟಿದ್ದರು. ಬದರಿನಾಥನನ್ನು ೨೦ ನಿಮಿಷ ಕಾಣುವ ಅವಕಾಶಸಿಕ್ಕಿತು. ಅಂತು ಮುಖ್ಯವಾದ ನಾಲ್ಕು ಧಾಮದ ದರ್ಶನವನ್ನು ಆನಂದದಿಂದ ಮಾಡಿದಂತಾಯಿತು.



ಮೇ ೩೦ರಂದು ಬದರಿಯಿಂದ ಪೀಪಲ್‌ಕೋಟಿಗೆ ಹಿಂದಿರುಗಿ ಅಲ್ಲಿಯೇ ಅಂದು ತಂಗಿದೆವು.

ಮೇ ೩೧: ಪೀಪಲ್‌ಕೋಟ್‌ನಿಂದ ನಾವು ಬೆಳಿಗ್ಗೆ ೫ ಗಂಟೆಗೆ ಹೊರಟೆವು. ದಾರಿಯಲ್ಲಿ ನಾವು ಕರ್ಣಪ್ರಯಾಗ, ದೇವ ಪ್ರಯಾಗವನ್ನು ನೋಡಿದೆವು. ಸುಮಾರು ೩ ಗಂಟೆಗೆ ಋಷಿಕೇಶಕ್ಕೆ ಬಂದೆವು. ಅಲ್ಲಿ ವಿಶ್ವನಾಥ ಮಂದಿರ, ಗೀತಾಭವನ, ರಾಮ್ ಝೂಲಾ ನೋಡಿದೆವು. ಅಲ್ಲಿಂದ ನಾವು ಹರಿದ್ವಾರಕ್ಕೆ ಹೊರಟೆವು.

ಜೂನ್ ೧: ಹರಿದ್ವಾರದಲ್ಲಿ ಪ್ರಸಿದ್ಧವಾದ ಮಾನಸಾದೇವಿ ಹಾಗೂ ಚಂಡೀದೇವಿಯ ಮಂದಿರಕ್ಕೆ ರೋಪ್‌ವೇನಲ್ಲಿ ಹೋಗಿ ದರ್ಶನವನ್ನು ಪಡೆದೆವು.

ಜೂನ್ ೨ರಂದು ಹರಿದ್ವಾರದಿಂದ ನಾವು ದೆಹಲಿಗೆ ಹಿಂತಿರುಗಿದೆವು. ಹೀಗೆ ನಮ್ಮ ಚಾರ್‌ಧಾಮ್ ಯಾತ್ರೆ ಅತ್ಯಂತ ಸ್ಮರಣೀಯವಾಗಿ ಸಮಾಪ್ತವಾಯಿತು. ✽